## ಕನ್ನಡ ಶಾಲೆಗಳ ಸ್ಥಿತಿಗತಿ




‘ಕನ್ನಡ ಶಾಲೆಗಳ ಭವಿಷ್ಯ’, ಎಂ. ಅಬ್ದುಲ್ ರೆಹಮಾನ್ ಪಾಷ ಅವರ ಮುಖಪುಟ ಲೇಖನ (ಸುಧಾ, ನ. 9) ಕನ್ನಡ ಶಾಲೆಗಳ ಸ್ಥಿತಿಗತಿಗಳನ್ನು ಬಿಚ್ಚಿಟ್ಟಿದೆ. ನಿಜಕ್ಕೂ ಕನ್ನಡ ಶಾಲೆಗಳಿಗೆ ಉತ್ತಮ ಭವಿಷ್ಯವಿದೆಯೇ ಎಂದು ಚಿಂತಿಸುವಂತಿದೆ. ಕನ್ನಡ ಕೇವಲ ನವೆಂಬರ್ ತಿಂಗಳ ಕನ್ನಡವಾಗದೆ ವರ್ಷದ ಹನ್ನೆರಡು ತಿಂಗಳೂ ಕನ್ನಡ ಬೆಳೆಸುವುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ.

—ಸು.ವಿಜಯಲಕ್ಷ್ಮಿ ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ,
ಎಸ್.ಲಕ್ಷ್ಮೀನರಸಿಂಹ ಚಾಮರಾಜನಗರ, ಗಾಣಧಾಳು ರಾಮಣ್ಣ ಚಿತ್ರದುರ್ಗ,
ಹುರಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ, ಸುಂದರ್ ಬೆಂಗಳೂರು,
ಮಹಾವೀರ ಕಾಸರ ಶಿವಮೊಗ್ಗ, ಬಿ.ರವೀಂದ್ರನಾಥ್ ಬೆಂಗಳೂರು,
ಪಿ.ಗೋವಿಂದರಾಜ್ ಶಿವಮೊಗ್ಗ, ಮಧುರ ಸುಬ್ರಹ್ಮಣ್ಯ ಬೆಂಗಳೂರು

### ಸರ್ಕಾರ ಮುಂದಾಗಬೇಕು

ಲೇಖನ ಗಮನಾರ್ಹ. ಮೈಸೂರಿನಲ್ಲೂ ಕನ್ನಡ ಕ್ರಿಯಾ ಸಮಿತಿಯು ಮೈಸೂರು ಜಿಲ್ಲೆಯ ಕನ್ನಡ ಶಾಲೆಗಳು ಮುಚ್ಚುತ್ತಿರುವ ಬಗ್ಗೆ ಸ್ವತಃ ಜಿಲ್ಲೆಯ ಕಡಿಮೆ ಮಕ್ಕಳಿರುವ ಎಲ್ಲ ಶಾಲೆಗಳ ಸಮೀಕ್ಷೆ ನಡೆಸಿತ್ತು. ಸರಕಾರಿ ಕನ್ನಡ ಶಾಲೆಗಳಲ್ಲಿ ಎಲ್ಲ ಉತ್ತಮ ಸೌಲಭ್ಯಗಳಿದ್ದರೂ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುತ್ತಾರೆ. ಸರಕಾರ ಶಿಕ್ಷಣ ಸಂಸ್ಥೆಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಉತ್ತಮ ಶಿಕ್ಷಣ ನೀಡಲು ಮುಂದಾಗಬೇಕು.

—ಕೊ.ಸು.ನರಸಿಂಹ ಮೂರ್ತಿ, ಮೈಸೂರು

### ಕನ್ನಡ ಕಲಿಕೆಗೆ ಅಡ್ಡಿ

ಮುಖಪುಟ ಲೇಖನ ಹಾಗೂ ‘ನಿಮ್ಮೊಡನೆ’ಯಲ್ಲಿ ಪ್ರಕಟವಾದ ಅನಿಸಿಕೆಗಳು ಕನ್ನಡಿಗರನ್ನು ಬಡಿದೆಬ್ಬಿಸುವಂತಿವೆ. ಹೆಚ್ಚಿನ ಆಂಗ್ಲಮಾಧ್ಯಮ ಶಾಲೆಗಳು ರಾಜಕಾರಣಿಗಳ ನಿಯಂತ್ರಣದಲ್ಲಿವೆ. ಕನ್ನಡ ಶಾಲೆಯ ಉಪಾಧ್ಯಾಯರು ತಮ್ಮ ಮಕ್ಕಳನ್ನು ಕಾನ್ವೆಂಟಿಗೆ ಬಿಟ್ಟು ತಮ್ಮ ಶಾಲೆ ಕಡೆ ಧಾವಿಸುತ್ತಾರೆ. ಮಗುವನ್ನು ಚಿವುಟುತ್ತಾ ತೊಟ್ಟಿಲನ್ನು ತೂಗಿ ಮಗುವನ್ನು ನಿದ್ದೆ ಮಾಡಿಸುವ ಯತ್ನದಂತಹ ಈ ಪ್ರಯೋಗಗಳೇ ಕನ್ನಡ ಕಲಿಕೆಗೆ ಅಡ್ಡಿಯಾಗಿರುವುದು.

—ಡಾ.ಕೆ.ಕೆ.ಜಯಚಂದ್ರಗುಪ್ತ ಹಾಸನ

### ಮಾಹಿತಿಪೂರ್ಣ

‘ನಿಮ್ಮೊಡನೆ’ಯಲ್ಲಿ ‘ಕನ್ನಡ ಕಡ್ಡಾಯ ಅನಿವಾರ್ಯ’ (ಬಿ.ಎಂ. ಹನೀಫ್) ಬರಹ ಮಾಹಿತಿಪೂರ್ಣವಾಗಿದೆ. ಕನ್ನಡ ಕಡ್ಡಾಯದ ಅನಿವಾರ್ಯತೆಯ ಬಗ್ಗೆ ಲೇಖಕರ ಅಭಿಪ್ರಾಯ ವಾಸ್ತವ ಸಂಗತಿಯನ್ನು ತೆರೆದಿಟ್ಟಿದೆ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ,
ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

### ಠುಮ್ರಿ ರಾಣಿಯ ಗಾನಯಾನ

‘ಠುಮ್ರಿ ರಾಣಿ ಇನ್ನು ನೆನಪು’ (ಉಮಾ ಅನಂತ್) ಲೇಖನ ಚೆನ್ನಾಗಿದೆ. ಹತ್ತು ಹಲವು ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾದ ವಿದುಷಿ ಗಿರಿಜಾದೇವಿ ಅವರ ಆರೂವರೆ ದಶಕಗಳ ಸಂಗೀತಯಾನ ನಿಜಕ್ಕೂ ಅಭಿನಂದನೀಯ.

—ಪಿ. ಜಯವಂತ ಪೈ, ಕುಂದಾಪುರ

### ಉತ್ತಮ ಬರಹ

ವಿಚಾರ ಲಹರಿಯಲ್ಲಿ ‘ಭೃಂಗದ ಬೆನ್ನೇರಿ’ (ಮೂಚಿ) ಬರಹ ಕವಿ ಮನಸ್ಸುಗಳಿಗೆ ಹಿತವಾದ ಸಿಂಚನ ನೀಡಿದೆ. ಉತ್ತಮ ಬರಹ.

—ಎಚ್.ಆನಂದಕುಮಾರ್ ಚಿತ್ರದುರ್ಗ,
ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ

### ಬಹೂಪಯೋಗಿ ಪಾಲಕ್

‘ಪಾಲಕ್ ರುಚಿ; ಆರೋಗ್ಯ ಪಾಲಕ’ (ಸಂತೋಷ ರಾವ್ ಪೆರ್ಮುಡ) ಲೇಖನ ಉಪಯುಕ್ತ ಮಾಹಿತಿಗಳಿಂದ ಕೂಡಿದೆ.

—ನಾರಾಯಣಯಾಜಿ ಶಿರಾಲಿ

### ಕಥೆ ಚೆನ್ನಾಗಿದೆ

‘ಚಹರೆ’ ಪತ್ತೇದಾರಿ ಕಥೆ (ರವಿರಾಜ ಬೈಕಂಪಾಡಿ) ಚೆನ್ನಾಗಿದೆಯಲ್ಲದೆ ಕೊನೆಯವರೆಗೂ ಕುತೂಹಲ ಕಾಯ್ದುಕೊಂಡಿದೆ.

—ಕೊಹಿಮ ಬಸರಕೋಡು

### ಸಮಂಜಸ

‘ಜಾಣರ ಪೆಟ್ಟಿಗೆ’ ಯಲ್ಲಿ ‘ಜಾಹೀರಾತು ಕಿರಿಕಿರಿ’ (ನರೇಂದ್ರ ನಾಯಕ್) ಅವರ ಪತ್ರ ಸಮಂಜಸವಾಗಿದೆ. ಮುಖ್ಯವಾಗಿ ವೃದ್ಧರು ಮತ್ತು ಕಣ್ಣು ದೋಷ ಇರುವವರಿಗೆ ದೂರದರ್ಶನ ಪರದೆ ತುಂಬ ಬರುವ ಜಾಹೀರಾತುಗಳು ಬಹಳ ಮುಜುಗರ ಉಂಟು ಮಾಡುತ್ತವೆ. ನೋಡುಗರಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸುವುದು ಒಳಿತು.

—ಆರ್.ಎಸ್. ಲಕ್ಷ್ಮೀಕಾಂತ ಬೆಂಗಳೂರು

### ನೋವು ನಿವಾರಕ

‘ನೋವು ನಿವಾರಕ ಬಳಸಬ್ಯಾಡ್ರಿ’ (ಎಸ್.ಪಿ. ಶ್ಯಾನಭಾಗ) ಲೇಖನ ನೋವು ನಿವಾರಕಗಳಿಂದ ಉಂಟಾಗುವ ಅನಾಹುತಗಳ ಮೇಲೆ ಬೆಳಕು ಚೆಲ್ಲಿದೆ.

—ಕಾಳೀಹುಂಡಿ ಶಿವಕುಮಾರ್ ಮೈಸೂರು,
ಕೆ.ಪಿ. ರಾಮಗುಂಡಿ ಬೈಲಹೊಂಗಲ

### ಚೀಂಕಾರ ಚೆಲುವು

ಯಡಹಳ್ಳಿ ಧಾಮದಲ್ಲಿ ‘ಚೀಂಕಾರ ಚೆಲುವು’ (ಪವನಕುಮಾರ್ ಎಚ್.) ಅವರ ಲೇಖನ ಚೆನ್ನಾಗಿದೆ. ಚಿತ್ರಗಳು ಕಣ್ಮನ ಸೆಳೆದವು.

—ರವೀಂದ್ರನಾಥ ಶಿ.ಯಡಹಳ್ಳಿ

### ಬದುಕಿಗೆ ಹದ, ಮನಸ್ಸಿಗೆ ಮುದ

ವ್ಯಕ್ತಿತ್ವ ವಿಕಸನದಲ್ಲಿ ‘ಮನಸ್ಸಿಗೆ ಒಂದಿಷ್ಟು ಮಾತು ಬೇಕು’ (ಡಾ. ಕೆ.ಎಸ್. ಪವಿತ್ರ) ಲೇಖನ ಅರ್ಥಪೂರ್ಣ.

—ರಾಜಶೇಖರ ಹಾದಿಮನಿ ಧಾರವಾಡ

### ಭಯದ ಭಾವಲೋಕ

ಪ್ರವಾಸ ಲೇಖನ (ವಾ.ಮುರಳೀಧರ ತೀರ್ಥಹಳ್ಳಿ) ಓದಿದೆ. ಕಾಶ್ಮೀರ ಇಂದು ಸೇನಾದಿಗಳ ಬೂಟಿನ ಪಥಸಂಚಲನದೊಂದಿಗೆ ನರಕ ಸದೃಶವಾಗಿರುವುದು ವಿಪರ್ಯಾಸ.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

